

### ಕಣ್ಣು ಕಟ್ಟುವ ಚಿತ್ರಣ

‘ಹಿಮಾಲಯದಲ್ಲಿ ಹಾಡು ಕುಣಿತ’ (ಜ. 22, ರಹಮತ್ ತರೀಕೆರೆ) ಪ್ರವಾಸ ಕಥನ, ಹಿಮಾಲಯದ ಚಾರಣದ ಅನುಭವದೊಂದಿಗೆ, ಅಲ್ಲಿನ ಜನರ ಹಾಡುಗಳು, ಅವುಗಳ ಸಾಹಿತ್ಯ, ಆಶಯ ಇವುಗಳನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದೆ. ಗಾಯಕರ ಚಿತ್ರಗಳೊಂದಿಗೆ, ಹಿಮಾಲಯದ ಚಿತ್ರ ಮನಸೂರೆಗೊಂಡಿತು. ‘ಓಂ ಮಣಿ ಪದ್ಮೇ ಹಂ’ ಹಾಡು ಹಾಗೂ ಅದರ ಹಿನ್ನೆಲೆ ಸಂಗೀತ ನನಗೆ ತುಂಬಾ ಇಷ್ಟ. ಅದನ್ನು ಕಣ್ಣುಮುಚ್ಚಿ ಆಸ್ವಾದಿಸುತ್ತಿದ್ದರೆ, ನಾನು ಬೇರೆಯೇ ಪ್ರಪಂಚಕ್ಕೆ ಹೋಗಿಬಿಡುತ್ತೇನೆ!

—ಬಿ.ವಿ. ರಾಜಲಕ್ಷ್ಮಿ, ಬೆಂಗಳೂರು

### ಪುಳಕಿತ ಅನುಭವ

ಬಹಳ ಸುಂದರವಾಗಿ ಮೂಡಿಬಂದ ಪ್ರವಾಸ ಕಥನ. ಅಲ್ಲಿನ ಹಾಡುಪಾಡುಗಳು, ಪಕ್ಷಿಗಳು, ಚಾರಣ ಮತ್ತು ಅದರಿಂದ ಬರುವ ಚಿಂತನೆಗಳು, ಸಾಹಸಗಳು ಎಲ್ಲವೂ ಓದುಗರ ಮೈಮನ ಪುಳಕಿತವಾಗುವಂತೆ ಮಾಡಿದವು.

—ಎಸ್. ವಿಜಯ, ಬೆಂಗಳೂರು

### ಸುಗ್ಗಿಯ ಸಿರಿಯಲ್ಲಿ....




ಸಂಕ್ರಾಂತಿ ಹಬ್ಬಕ್ಕೆ ಸಂಬಂಧಿಸಿದಂತೆ ಮುಖ್ಯಪುಟ ಲೇಖನಗಳು ವಿಶೇಷವಾಗಿದ್ದವು. ಸಂಕ್ರಾಂತಿ ಹಬ್ಬದ ನಿಜವಾದ ಆಶಯಗಳನ್ನು ಪ್ರಸ್ತುತಪಡಿಸಿದವು. ಹಬ್ಬದ ಆಚರಣೆ ಒಂದೊಂದು ಕಡೆಗಳಲ್ಲಿ ಒಂದೊಂದು ರೀತಿ. ಆದರೆ ಉದ್ದೇಶ ಒಂದೇ— ಪ್ರಕೃತಿ, ಮಾನವರೊಂದಿಗೆ ಸಹಬಾಳ್ವೆ, ಸಹಾನುಭೂತಿ, ಸಂಭ್ರಮದ ಜೀವನ. ಈ ಆಶಯವೇ ಬದುಕಿನ ಬಂಡಿ ಮುಂದೆ ಸಾಗಲು ಅಡಿಪಾಯವಲ್ಲವೇ? ಇಂಥ ಅರ್ಥಪೂರ್ಣ ಆಶಯಗಳನ್ನು ಹೊತ್ತ ಸಂಕ್ರಾಂತಿ ಹಬ್ಬ ಹಾಗೂ ಆಚರಣೆಯ ವಿಧಗಳು ‘ಸುಧಾ’ದಲ್ಲಿ ಮೂಡಿಬಂದದ್ದು ಸಂತೋಷವೆನಿಸಿತು.

—ನಿಧಿ ಡಿ., ಮೈಸೂರು

### ಸ್ತನ ಕ್ಯಾನ್ಸರ್; ಕಾಳಜಿ ಅತ್ಯವಶ್ಯ

‘ಶ್! ಸ್ತನ ಕಥನ’ (ಜ. 22, ಪ್ರೇಮಲತ ಬಿ.) ಮುಖಪುಟ ಲೇಖನ, ಈ ಕಾಲಕ್ಕೆ ಅವಶ್ಯವಾದ ಉಪಯುಕ್ತ ಮಾಹಿತಿಗಳಿಂದ ಕೂಡಿದೆ. ಪ್ರಕೃತಿದತ್ತವಾದ ಅಂಗಾಂಗ ಮಾನವನ ಪರಿಪೂರ್ಣತೆಯ ಸಂಕೇತ. ಹೆಣ್ಣಿಗೆ ಸ್ತನಗಳು ಸೌಂದರ್ಯದ ಪ್ರತೀಕ. ನವಜಾತ ಶಿಶುವಿಗೆ ಸ್ತನ್ಯಪಾನ ಅಮೃತ. ಈಚೆಗೆ ಸ್ತನ ಕ್ಯಾನ್ಸರ್‌ಗೆ ತುತ್ತಾಗುವವರ ಸಂಖ್ಯೆ ಏರುತ್ತಿದೆ. ಈ ಬಗ್ಗೆ ಕಾಳಜಿ ಅತ್ಯವಶ್ಯಕ. ಈ ನಿಟ್ಟಿನಲ್ಲಿ ಲೇಖನ ಬಹಳ ಸಹಕಾರಿಯಾಗಿದೆ. ಸ್ತನಗಳ ಆರೋಗ್ಯದ ಕುರಿತಂತೆ ಸಂಪೂರ್ಣ ಮಾಹಿತಿಯನ್ನು ಒದಗಿಸಿದೆ. ಸ್ತನಗಳ ಸ್ವ ಪರೀಕ್ಷೆ ವಿಧಾನದ ಬಗ್ಗೆ ಓದುಗರಿಗೆ ಸಲಹೆ ನೀಡಿರುವುದು ಉಚಿತವಾಗಿದೆ. ಕ್ಯಾನ್ಸರ್ ಮಾರಿಯಿಂದ ಗುಣಹೊಂದುವ ದಾರಿಯನ್ನು ತಿಳಿಸಿದೆ. ಓದಿ ತಿಳಿಯಬೇಕಾದ ಉತ್ತಮ ಲೇಖನ.

—ಮಧು, ಬೆಂಗಳೂರು




### ಪರಿಪೂರ್ಣ ಮಾಹಿತಿ ಸಿಕ್ಕಿತು

ಅತ್ಯುತ್ತಮ ಲೇಖನ. ಹೇಳಿಕೊಳ್ಳಲು ಸಂಕೋಚವೆನಿಸುವ, ಅಪ್ಪಾಗಿ ಒಂದು ಹಂತದವರೆಗೂ ಸುಳಿವು ಸಿಗದಿರುವ ಸ್ತನ ಕ್ಯಾನ್ಸರ್ ಬಗ್ಗೆ ಚಿತ್ರದೊಂದಿಗೆ ಸವಿಸ್ತಾರವಾಗಿ ವಿವರಿಸಿರುವ ಲೇಖಕಿಗೆ ಧನ್ಯವಾದ. ಮುಂಜಾಗ್ರತೆಯಿಂದ ಪರೀಕ್ಷಿಸಿಕೊಳ್ಳುವ ವಿಧಾನ, ಚಿಕಿತ್ಸೆಗಳ ಬಗ್ಗೆ ಓದುಗರಿಗೆ ಪೂರ್ಣ ಪರಿಚಯ ಸಿಕ್ಕಿತು.

—ಭಾರತೀ ಗಂಗಾಧರ್

### ಅರಿವಿನ ಬರಹ



‘ಶಾಲೆ ಕಾರ್ಖಾನೆಯಾದಾಗ, ಮಗು ಉತ್ಪನ್ನವಾಗುತ್ತದೆ!’ (ಜ. 22, ನರೇಂದ್ರ ರೈ ದೇರ್ಲ) ಲೇಖನ, ನಮ್ಮಂಥ ಪಾಲಕರ ಮನಮುಟ್ಟುವಂತಿದೆ. ಥಳಕು ಬಳುಕಿನ ಶಾಲೆಗೆ ಮಾರುಹೋದ ನಾವು ನಮಗೇ ಗೊತ್ತಿಲ್ಲದ ಹಾಗೆ ನಮ್ಮ ಮಕ್ಕಳಿಗೆ ಎಂಥ ಅನ್ಯಾಯ ಮಾಡುತ್ತಿದ್ದೇವೆ ಎಂಬ ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದೆ.

—ಹುರುಕಡ್ಲಿ ಶಿವಕುಮಾರ,ಬಾಚಿಗೊಂಡನಹಳ್ಳಿ

### ಸಾಮೂಹಿಕ ಹೊಣೆಗಾರಿಕೆ ಬೇಕು

ಸಮಾಜದ ಕಣ್ಣು ತೆರೆಸುವಂಥ ಬರಹ. ಅನುದಾನರಹಿತ ಕೆಲವು ಆಂಗ್ಲಮಾಧ್ಯಮ ಶಾಲೆಗಳು ಫಲಿತಾಂಶದ ಮೇಲೆ ಅವಲಂಬಿತವಾಗಿವೆ. ಫಲಿತಾಂಶಕ್ಕಾಗಿ ಏನು ಬೇಕಾದರೂ ಮಾಡುತ್ತವೆ. ಅಲ್ಲಿ ಕೆಲಸ ಮಾಡುವ ಶಿಕ್ಷಕರೂ ಧ್ವನಿ ಇಲ್ಲದ ದಮನಿತರಾಗಿರುತ್ತಾರೆ. ಹೇಳಿದಂತೆ ಕೇಳಿಲ್ಲವೆಂದರೆ ನಿರ್ದಾಕ್ಷಿಣ್ಯವಾಗಿ ಕೆಲಸದಿಂದ ತೆಗೆಯುತ್ತಾರೆ. ಹಾಗಾಗಿ ಹೆದರಿ ಶಾಲಾ ಆಡಳಿತ ಮಂಡಳಿ ಹೇಳಿದಂತೆ ಶಿಕ್ಷಣ ನೀಡುವುದು ಅವರಿಗೆ ಅನಿವಾರ್ಯವಾಗುತ್ತದೆ. ರೂಪಕೇಂದ್ರಿತ ಶಾಲೆಗಳು ಬಲಿಷ್ಠರ ಕೈಯಲ್ಲಿರುವುದರಿಂದ ಏನೂ ಮಾಡಲು ಸಾಧ್ಯವಿಲ್ಲ. ಬದಲಾಗಿ ಮಕ್ಕಳ ಮನಸ್ಸು ಸ್ವಸ್ಥವಾಗಿ ಇರುವಂತೆ ನೋಡಿಕೊಳ್ಳುವ ಸಾಮೂಹಿಕ ಹೊಣೆಗಾರಿಕೆಯನ್ನು ಸಮಾಜ ನಿರ್ವಹಿಸಬೇಕಾಗಿದೆ. ಸರ್ಕಾರಿ ಶಾಲೆಗಳನ್ನು ಮೌಲ್ಯವರ್ಧನೆ ಮಾಡಬೇಕು. ಸರ್ಕಾರಿ ಶಾಲೆಗಳಲ್ಲೂ ಆಂಗ್ಲಮಾಧ್ಯಮ ಜಾರಿಯಾಗಬೇಕು.

—ಟಿ. ಶಿವಮೂರ್ತಿ ಉಪ್ಪಾರ,
ಚಾಮರಾಜನಗರ

### ದೇಹದಾನ; ಆಂದೋಲನದಂತಾಗಲಿ

‘ಅಂಗಾಂಗ ದಾನ ಪ್ರಮಾಣ ಹೆಚ್ಚಳ ಸಮಾಧಾನಕರ’ (ಜ. 22, ಉಮಾ ಅನಂತ್) ‘ನಿಮ್ಮೊಡನೆ’ ಅಂಕಣದಲ್ಲಿ ‘ಅಂಗಾಂಗ ದಾನ’ದ ಮಹತ್ವವನ್ನು ಬಹಳ ಅಚ್ಚುಕಟ್ಟಾಗಿ ವಿವರಿಸಲಾಗಿದೆ. ಲೇಖಕರು ಅಂಕಿಅಂಶಗಳನ್ನು, ಅಗತ್ಯ ಮಾಹಿತಿಗಳನ್ನು ಒದಗಿಸಿದ್ದಾರೆ. ಆದರೆ ಗ್ರಾಮೀಣ ಭಾಗದ ಜನರು ದೇಹದಾನ, ಅಂಗಾಂಗ ದಾನದ ವಿಷಯದಲ್ಲಿ ಹಿಂಜರಿಯುತ್ತಿರುವುದೂ ಅಷ್ಟೇ ಸತ್ಯ! ಇದರ ಬಗ್ಗೆ ಜನರಲ್ಲಿ ತಿಳಿವಳಿಕೆ ನೀಡಿ ಪ್ರಚಾರ ಮಾಡಬೇಕಾದ ಅಗತ್ಯ ಇದೆ. ಮಾನವ ಜನ್ಮ ದೊಡ್ಡದು. ಅದರಂತೆ ಸತ್ತ ನಂತರ ದೇಹದಾನ ಮಾಡಿದರೆ ಇನ್ನೂ ಶ್ರೇಷ್ಠ. ಇದನ್ನು ಆಂದೋಲನದ ರೀತಿ ಮಾಡಿ ಸಾಮಾಜಿಕ ಕಳಕಳಿ ಮೂಡಿಸಬೇಕಾದ ಜರೂರು ಇದೆ.

—ಟಿ.ಎಸ್. ಪ್ರತಿಭಾ.ಚಿತ್ರದುರ್ಗ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in